# ಪ್ರಜಾ ಮಾಹಿತಿ

(ಮಾಹಿತಿ ಹಕ್ಕು ವಿಷಯಕ್ಕೆ ಮೀಸಲಾದ ತ್ರೈಮಾಸಿಕ)

CREAT BANGALORE

ಸಂಖ್ಯೆ-2/2008 ಏಪ್ರಿಲ್-ಜೂನ್ 2008


## ಮಾಹಿತಿ ಕಾಯ್ದೆ ಪರಿಧಿಯಿಂದ ತೆರಿಗೆ ತನಿಖೆ ಹೊರಗೆ

ಆದಾಯ ತೆರಿಗೆ ಇಲಾಖೆ ತಾನು ನಡೆಸುತ್ತಿರುವ ತನಿಖೆ




ಮುಕ್ತಾಯಗೊಳ್ಳುವವರೆಗೆ, ಈ ವಿಚಾರವಾಗಿ ಯಾವುದೇ ಮಾಹಿತಿಯನ್ನು ಸಂಬಂಧಿಸಿದವರಿಗೆ ನೀಡುವ ಅಗತ್ಯವಿಲ್ಲ ಎಂಬ ನಿಲುವನ್ನು ಕೇಂದ್ರ ಮಾಹಿತಿ ಆಯೋಗ ಎತ್ತಿಹಿಡಿದಿದೆ.

ಶ್ರೀ ಶಂಕರ್ ಶರ್ಮ ಹಾಗೂ ಶ್ರೀ ದೇವಿನಾ ಮೆಹ್ರಾ ಒಂದು ಷೇರು ವ್ಯವಹಾರ ಕಂಪನಿಯನ್ನು ನಡೆಸುತ್ತಿದ್ದಾರೆ. ಆದಾಯ ತೆರಿಗೆ ಇಲಾಖೆ ಅವರನ್ನು ತನಿಖೆಗೆ ಒಳಪಡಿಸಿತ್ತು. ಅದರ ತನಿಖೆ ನಡೆಯುತ್ತಿರುವಾಗ ಇವರು ಆ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರು. ಇಲಾಖೆಯ ತನಿಖೆ ಕೇವಲ ಪ್ರಾಥಮಿಕ ಹಂತವನ್ನಷ್ಟೇ ಪರಿಶೀಲಿಸುತ್ತಿಲ್ಲ. ನಂತರದ ಕ್ರಮಗಳ ಕುರಿತು ತನಿಖೆ ನಡೆಸುತ್ತಿದೆ. ಈ ಪ್ರಾಥಮಿಕ ತನಿಖೆಯ ಆಧಾರದಲ್ಲಿ ತೆರಿಗೆಯ ಅಂತಿಮ ಲೆಕ್ಕ ಹಾಕಲಾಗುತ್ತಿದೆ. ಹಾಗಾಗಿ ಈ ಹಂತದಲ್ಲಿ ಮಾಹಿತಿ ಕೊಡಲು ಸಾಧ್ಯವಿಲ್ಲವೆಂದು ಆದಾಯ ತೆರಿಗೆ ಇಲಾಖೆ ವಾದಿಸಿತು.

ಪ್ರಕರಣ ಸಿಐಸಿಯ ಮುಂದೆ ದಾಖಲಾಯಿತು. ಸಾರ್ವಜನಿಕ ಪ್ರಾಧಿಕಾರಗಳು ಮಾಹಿತಿ ನೀಡಬೇಕಾಗುತ್ತದಾದರೂ ಅದರ ಕಾರ್ಯ ಚಟುವಟಿಕೆಗೆ ಧಕ್ಕೆಯಾಗುವ ಸಂದರ್ಭಗಳಲ್ಲಿ ತಕ್ಕ ರಕ್ಷಣೆ ಪಡೆದುಕೊಳ್ಳುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ತನಿಖೆ ಜಾರಿಯಲ್ಲಿರುವಾಗ ಆದಾಯ ತೆರಿಗೆ ಇಲಾಖೆ ಮಾಹಿತಿ ನೀಡದಿರುವುದು ಸಮ್ಮತವೆಂದು ಕೇಂದ್ರ ಮಾಹಿತಿ ಆಯೋಗ ತೀರ್ಮಾನಿಸಿತು.

## ಪ್ರಯಾಣ ವೆಚ್ಚ - ಮಾಹಿತಿ ವೈಯುಕ್ತಿಕವಲ್ಲ

ಓರ್ವ ಸರ್ಕಾರಿ ಸೇವೆಯಲ್ಲಿರುವಾತನ ಪ್ರವಾಸ ವೇಳೆಯಲ್ಲಿ ತಗುಲಿದ



ಖರ್ಚುಗಳ ವಿವರವನ್ನು ನಾಗರಿಕರು ಕೇಳ ಪಡೆಯಬಹುದೇ? ಇದೀಗ ಕೇಂದ್ರ ಮಾಹಿತಿ ಆಯೋಗ,ಈ ಮಾಹಿತಿಗಳು ವೈಯುಕ್ತಿಕವಲ್ಲವಾದ್ದರಿಂದ ಕೇಳಿದ ಅರ್ಜಿದಾರರಿಗೆ ಒದಗಿಸಬೇಕು ಎಂದು ಸ್ಪಷ್ಟಪಡಿಸಿದೆ.

ಭಾರತ್ ಪೆಟ್ರೋಲಿಯಂನ ಉದ್ಯೋಗಿಯೊಬ್ಬರ ಪ್ರವಾಸ, ಪ್ರಯಾಣ ವೆಚ್ಚಗಳ ಪೂರ್ಣ ವಿವರವನ್ನು ನಾಗರಿಕರೊಬ್ಬರು ಕೇಳಿ ಅರ್ಜಿ ಸಲ್ಲಿಸಿದ್ದರು. ಪೆಟ್ರೋಲಿಯಂನ ಮಾಹಿತಿ ಅಧಿಕಾರಿ, ಅಲ್ಲದೆ ಮೇಲ್ಮನವಿ ಪ್ರಾಧಿಕಾರ ಕೂಡ ಈ ಮಾಹಿತಿಗಳನ್ನು ನೀಡಲು ನಿರಾಕರಿಸಿ, ಅದಕ್ಕೆ ಈ ವಿವರ ವೈಯುಕ್ತಿಕವಾದುದು ಎಂಬ ಕಾರಣವನ್ನು ನೀಡಲಾಗಿತ್ತು.ಮನವಿಯನ್ನು ಆಧರಿಸಿ ತನಿಖೆ ನಡೆಸಿದ ಸಿಐಸಿ 'ಸಾರ್ವಜನಿಕ ಸೇವಕರ ಪ್ರವಾಸ, ಪ್ರಯಾಣಗಳ ವೆಚ್ಚ ವೈಯುಕ್ತಿಕವಾದುದಲ್ಲ. ಹಾಗಾಗಿ ಅರ್ಜಿದಾರರ ಮಾಹಿತಿ ಪೂರೈಸಲೇಬೇಕು ಎಂದು ಘೋಷಿಸಿದೆ.

## ಸಹಕಾರಿ ಸಂಘ- ಸಾರ್ವಜನಿಕ ಪ್ರಾಧಿಕಾರವೇ?



ಸಹಕಾರಿ ಸಂಘಗಳು ಹಾಗೂ ಹೌಸಿಂಗ್ ಸೊಸೈಟಿಗಳು ಮಾಹಿತಿ ಕಾಯ್ದೆಯಡಿ ಬರುತ್ತವೆ ಎನ್ನುವ ಬಗ್ಗೆ ಸಾಕಷ್ಟು ಗೊಂದಲಗಳಿವೆ. ಈ ವಿಚಾರ ಎಷ್ಟು ಶೀಘ್ರವಾಗಿ ಇತ್ಯರ್ಥವಾದೀತೋ ಅಷ್ಟು ಒಳ್ಳೆಯದು ಎಂಬುದು ತಜ್ಞರ ಅಭಿಮತ. ಈಗಾಗಲೇ ಹಲವಾರು ಅರ್ಜಿದಾರರಿಗೆ ಸಹಕಾರಿ ಸಂಘಗಳಿಂದ ಮಾಹಿತಿ ಸಿಕ್ಕಿಲ್ಲ. ಕೇಳಿದರೆ ಮಾಹಿತಿ ಕಾಯ್ದೆಯಡಿ ಸಹಕಾರ ಸಂಘ ಬಾರದು ಎಂಬ ಮಕ್ಕಿಕಾಮಕ್ಕಿ ಉತ್ತರ.

ಇದೊಂದು ತರ ರಂಗೋಲಿ ಕೆಳಗೆ ನುಸುಳುವ ತಂತ್ರ. ಸಹಕಾರ ಸಂಘಗಳ ಹುಟ್ಟು ಮತ್ತು ಅವುಗಳ ರಚನೆಯಿಂದ ಅವನ್ನು ಸಾರ್ವಜನಿಕ ಪ್ರಾಧಿಕಾರ ಎಂದು ಮಾಹಿತಿ ಕಾಯ್ದೆಯಂತೆವ್ಯಾಖ್ಯಾನಿಸಬಹುದಾದರೂ, ಈ ಸಂಘಗಳ ನಿರ್ವಹಣೆಯ ಆಧಾರದಲ್ಲಿ ಆರ್‌ಟಿಐಎಯಿಂದ ಹೊರಗಿರುವುದಾಗಿ ಹೇಳಿ ಕೊಳ್ಳಲಾಗುತ್ತಿದೆ.

ಆದರೆ ಈಗಾಗಲೇ ಕರ್ನಾಟಕದ ಮಾಹಿತಿ ಆಯೋಗ ಸಹಕಾರಿ ಸಂಘಗಳೂ ಕೂಡ ಆರ್‌ಟಿಐಎ ವ್ಯಾಪ್ತಿಗೆ ಬರುತ್ತವೆ ಎಂದೇ ತೀರ್ಮಾನಿಸಿದೆ. ಕೇಂದ್ರ ಮಾಹಿತಿ ಆಯೋಗ ಈ ಬಗ್ಗೆ ಇನ್ನೂ ಸ್ಪಷ್ಟ ನಿಲುವು ಪ್ರಕಟಿಸಿಲ್ಲ. ಸಹಕಾರಿ ವ್ಯವಸ್ಥೆಗಳೂ ಮಾಹಿತಿಯನ್ನು ಹಂಚಿಕೊಳ್ಳಲೇಬೇಕು ಎಂಬರ್ಥದ ಭಾವನೆ ಬರುವಂತ ಸೂಚನೆಗಳನ್ನು ಸಿಐಸಿ ಈಗಾಗಲೇ ಹಲವು ಬಾರಿ ನೀಡಿದೆ.

ದೆಹಲಿಯ ಓರ್ವ ಅರ್ಜಿದಾರ ಅಲ್ಲಿನ ಈಸ್ಟ್ ಎಂಡ್ ಕೋ ಅಪರೇಟಿವ್ ಗ್ರೂಪ್ ಹೌಸಿಂಗ್ ಸೊಸೈಟಿ ಲಿ.ನಿಂದ ಕೆಲವು ಮಾಹಿತಿ ಕೋರಿದ್ದರು. ಸೊಸೈಟಿ ಖಾಸಗಿ ಮಾದರಿಯದ್ದು ಎಂಬ ಕಾರಣ ಒಡ್ಡಿ ಮಾಹಿತಿಯನ್ನು ನಿರಾಕರಿಸಲಾಗಿತ್ತು. ಸಿಐಸಿಗೆ ಮೇಲ್ಮನವಿ ಹೋಯಿತು. ಸೊಸೈಟಿ ಖಾಸಗಿ ರೂಪದ್ದಾದರೂ ಮಾಹಿತಿ ಕೋರಿದ್ದು ಆರ್‌ಟಿಐಎಯ ಯು/ಎಸ್ 2(1)ರ ಪ್ರಕಾರ ಮಾಹಿತಿ ಸಹಕಾರ ಸಂಘಗಳ ರಿಜಿಸ್ಟಾರ್‌ರಿಗೆ ದೊರಕುವಂತದ್ದು. ಹಾಗಾಗಿ ಒದಗಿಸಬೇಕು ಎನ್ನಲಾಗಿತ್ತು.

**(ಸಿಐಸಿ/ಡಬ್ಲ್ಯುಬಿ/ಸಿ/2006/00080 ದಿ.9.10.2006)**

## ಇಷ್ಟಕ್ಕೂ ಮಾಹಿತಿ ಏಕೆ ಬೇಕು?

ಇಲ್ಲ, ಕೇವಲ ಮಾಹಿತಿ ಹಕ್ಕಿನ ಬಗ್ಗೆ ಪಕ್ಕಾ ಆದ ತಿಳುವಳಿಕೆ ಹೊಂದಿರುವುದು ಎಂತದ್ದೂ ಪ್ರಯೋಜನ ಇಲ್ಲ. ಮುಖ್ಯವಾಗಿ, ಆರ್‌ಟಿಐಎಯನ್ನು ನಿಮ್ಮ ಹಾಗೂ ಸಮುದಾಯಕ್ಕೆ ಲಾಭವಾಗುವಂತೆ ಬಳಸುವುದು ಅವಶ್ಯಕ. ಈಗ ಕಾಡುವ ಇನ್ನೊಂದು ಪ್ರಶ್ನೆ, ಮಾಹಿತಿ ಹಕ್ಕನ್ನು ಉಪಯೋಗಿಸುವುದಾದರೂ ಎಲ್ಲಿ? ಹೋಗಲಿ, ಸಿಕ್ಕ ಮಾಹಿತಿಯನ್ನು ಏನು ಮಾಡಬೇಕು? ಇಷ್ಟಕ್ಕೂ ಕೇಳಬೇಕಾದುದೆಂದರೆ, ಮಾಹಿತಿ ಏಕೆ ಬೇಕು?



ನಾಗರಿಕರು ಕೇಳುವ ಮಾಹಿತಿಗಳ ವಿಷಯವನ್ನು ಇಂತವೇ ಆಗಿರಬೇಕು ಎಂದು ಸಲಹೆ ನೀಡುವುದು ಕಷ್ಟಕರ. ಇವನ್ನು ಎರಡು ವರ್ಗವಾಗಿ ವಿಂಗಡಿಸಬಹುದು. ಮೊದಲ ವಿಭಾಗದಲ್ಲಿ, ವೈಯುಕ್ತಿಕ ಪರಿಹಾರಗಳಿಗೆ ಕುರಿತಾದದ್ದು. ಉದಾಹರಣೆಗೆ, ಪೋಲೀಸ್ ಸ್ಟೇಷನ್‌ನಲ್ಲಿ ನೀವಿತ್ತ ದೂರಿನ ಸ್ಥಿತಿ ತಿಳಿಯಲು ಮಾಹಿತಿ ಹಕ್ಕು ಅಸ್ತ್ರವಾದೀತು. ವಿದ್ಯುತ್ ಸಂಪರ್ಕ ಕಲ್ಪಿಸಲು ಆದ ವಿಳಂಬ, ಬಿಲ್ಡಿಂಗ್ ಪ್ಲಾನ್ ಮಂಜೂರಾತಿ, ನಿವೃತ್ತಿ ವೇತನ, ಬ್ಯಾಂಕ್ ಸಾಲ, ವಿದ್ಯಾರ್ಥಿ ವೇತನ, ಠೇವಣಿ ಮರುಪಾವತಿಯಂತ ಹತ್ತು ಹಲವು ವಿಚಾರಗಳಲ್ಲಿ ಮಾಹಿತಿ ಹಕ್ಕನ್ನು ಸಮರ್ಥವಾಗಿ ರೂಢಿಸಿಕೊಳ್ಳಬಹುದು.

ಸಣ್ಣ ಪ್ರಮಾಣದಲ್ಲಾದರೂ ಸಮಾಜದ ಹಿತಕ್ಕಾಗಿ ದುಡಿಯುವ ಮನಸ್ಸಿರುವುದಾದರೆ, ಮಾಹಿತಿ ಹಕ್ಕನ್ನು ಬಳಸಲು ಸಾಧ್ಯವಿದೆ. ರಸ್ತೆ ಕಾಮಗಾರಿಯಲ್ಲಿ, ಒಳ ಚರಂಡಿ ನಿರ್ಮಾಣದಲ್ಲಿ, ಬೀದಿ ದೀಪ, ನಲ್ಲಿ ಸಂಪರ್ಕ, ಪ್ರಾಥಮಿಕ ಆರೋಗ್ಯ ಕೇಂದ್ರದ ಖರ್ಚು ವೆಚ್ಚ, ಸಾರ್ವಜನಿಕ ವಿತರಣಾ ವ್ಯವಸ್ಥೆ ಮುಂತಾದ ಅನೇಕ ವಿಚಾರಗಳಲ್ಲಿ ಯೋಜನೆ ವಿವರ ಪಡೆಯಬಹುದು. ಆಗಬಹುದಾದ ಭ್ರಷ್ಟಾಚಾರಕ್ಕೆ ತಡೆ ಒಡ್ಡಬಹುದು. ಇವು ಮಾಹಿತಿ ಪಡೆಯಲಿರುವ ಅವಕಾಶಗಳ ಗುಡ್ಡದ ಪುಟ್ಟ ತುದಿ ಮಾತ್ರ.

ಇಂತಹ ವಿಚಾರಗಳಲ್ಲಿ, ಪ್ರತಿಯೊಂದಕ್ಕೂ ವಿಭಿನ್ನ ಮಾದರಿಯ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಮಾಹಿತಿ ಕಾಯ್ದೆಗೂ ಪ್ರತಿ ವಿಷಯಕ್ಕೆ ಬೇರೆಯದೇ ಆದ ಪ್ರಶ್ನಾವಳಿ ಸಿದ್ಧಪಡಿಸಬೇಕಾಗುತ್ತದೆ. ಮೊದಲು ಪರಿಣಾಮಕಾರಿ ಪ್ರಶ್ನೆಗಳನ್ನು ಹುಟ್ಟುಹಾಕಲು ಕಲಿಯಬೇಕಾಗುತ್ತದೆ.

**ನಿರ್ದಿಷ್ಟ ವಿಷಯವಿದ್ದುದಾದರೆ ಆಸಕ್ತರು ಈ ವಿಚಾರವಾಗಿ ಕ್ರಿಯೇಟ್‌ಗೆ ಪತ್ರ ಅಥವಾ ಈ-ಮೇಲ್ ಕಳಿಸಬಹುದು. ಸಹಕರಿಸಲು ಪ್ರಯತ್ನಿಸಲಾಗುವುದು.**

## ಮಾಹಿತಿ ಆಂದೋಲನದಲ್ಲಿ ಜೊತೆಯಾಗಿ!

**ಕ**ರ್ನಾಟಕ ರಾಜ್ಯ ಸರ್ಕಾರವು ೨೦೦೦ದಲ್ಲಿ ಕರ್ನಾಟಕ ಮಾಹಿತಿ ಕಾಯ್ದೆಯನ್ನು ಜಾರಿಗೆ ತಂದ ದಿನದಿಂದ ಬೆಂಗಳೂರಿನ ಗ್ರಾಹಕ ಹಕ್ಕು, ಶಿಕ್ಷಣ ಮತ್ತು ಜಾಗೃತಿ ದತ್ತಿ (ಕ್ರಿಯೇಟ್) ಅದರ ಉತ್ತೇಜನಕ್ಕೆಂದು ಮುಂಚೂಣಿಯಲ್ಲಿದೆ.

ಕೇಂದ್ರ ಸರ್ಕಾರವೂ ಆರ್‌ಟಿಐಎಯನ್ನು ಚಾಲ್ತಿಗೆ ತಂದ ಮೇಲೆ ಈ ಆಂದೋಲನ ಇನ್ನಷ್ಟು ಬಿರುಸುಗೊಂಡಿದೆ. ಅಧಿಕಾರಿ ವರ್ಗಕ್ಕೆ ಹಾಗೂ ನಾಗರಿಕರಿಗೆ ತರಬೇತಿ ನೀಡುವುದು ಆಂದೋಲನದ ಪ್ರಮುಖ ಹೆಜ್ಜೆ. ಈಗಾಗಲೇ ಭಿತ್ತಿ ಪತ್ರ, ಸ್ಟಿಕ್ಕರ್ಸ್, ಕರಪತ್ರ, ಮಾರ್ಗದರ್ಶಿ ಕೈಪಿಡಿಯಂತಹ ಪ್ರಚಾರ ಸಾಮಗ್ರಿಗಳನ್ನು ಕ್ರಿಯೇಟ್ ದಂಡಿಯಾಗಿ ಮುದ್ರಿಸಿದೆ.

ಕಾರ್ಯಾಗಾರಗಳು ಮತ್ತು ವಿಚಾರ ಸಂಕಿರಣಗಳನ್ನು ನಿಯಮಿತವಾಗಿ ಮಾಡುತ್ತಲೇ ಬರಲಾಗಿದೆ. ಮಾಹಿತಿ ಕಾಯ್ದೆ ವಿಷಯದಲ್ಲಿ ಕರ್ನಾಟಕದ ನಾಗರಿಕ ಸಂಘಟನೆಗಳ ನೆಟ್‌ವರ್ಕ್ ರೂಪಿಸಲಾಗಿದೆ. ಕ್ರಿಯೇಟ್ ಹಾಗೂ ಇತರ ಸಂಘಟನೆಗಳು ವಿವಿಧ ಅಭಿವೃದ್ಧಿ ವಿಷಯದಲ್ಲಿ ಮಾಹಿತಿ ಕೇಳಿ ಅರ್ಜಿ ಸಲ್ಲಿಸುತ್ತಿದ್ದಾರೆ. ನೆಟ್‌ವರ್ಕ್ ಪಾಲುದಾರರ ಮೂಲಕ ಮಾಹಿತಿ ಕಾಯ್ದೆ ಜಾರಿಯ ತನಿಖೆ ಕೈಗೊಳ್ಳಲಾಗಿದೆ.



ಮಾಹಿತಿ ಕೇಂದ್ರವೊಂದು ಕ್ರಿಯೇಟ್‌ನ ಕಛೇರಿಯಲ್ಲಿ ಸ್ಥಾಪನೆಗೊಂಡಿದ್ದು, ಜನರಿಗೆ, ಅಧ್ಯಯನಶೀಲರಿಗೆ ಮತ್ತು ಸಂಶೋಧಕರಿಗೆ ಅಗತ್ಯ ದಾಖಲೆಗಳನ್ನು ಪೂರೈಸಲು ಸಶಕ್ತವಾಗಿದೆ. ಈ ಮಾಹಿತಿ ಕೇಂದ್ರದಲ್ಲಿ ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಿಸಿದಂತೆ ಪ್ರಕರಣ ಪಠ್ಯಗಳು, ಪುಸ್ತಕಗಳು, ನಿಯತಕಾಲಿಕಗಳು, ತರಬೇತಿ ಸಾಮಗ್ರಿಗಳು, ಸಿಡಿ ಇತ್ಯಾದಿಗಳು ಲಭ್ಯವಿವೆ. ಇಂಗ್ಲೀಷ್‌ನಲ್ಲಿ **'ಇನ್ಫೋಟ್ಯಾಪ್'** ಮತ್ತು ಕನ್ನಡದಲ್ಲಿ **'ಪ್ರಜಾ ಮಾಹಿತಿ'** ಎಂಬ ವಾರ್ತಾಪತ್ರಗಳು ಮಾಹಿತಿ ಕಾಯ್ದೆ ಆಂದೋಲನಕ್ಕೆಂದು ಮೀಸಲಾಗಿಟ್ಟು ಪ್ರಕಾಶಿಸಲಾಗುತ್ತಿದೆ.

ನಿಜಕ್ಕೂ ಮಾಹಿತಿ ಕಾಯ್ದೆ ಯಶಸ್ಸು ಕಾಣಬೇಕಾದರೆ ನಾಗರಿಕರ ಪಾಲ್ಗೊಳ್ಳುವಿಕೆಯ ಅಗತ್ಯವಿದೆ. ನಾವು ನೀವೆಲ್ಲ ಮಾಹಿತಿ ಅರ್ಜಿಗಳನ್ನು ಹಾಕುತ್ತಿರಬೇಕು. ಸಮಾಜದ ಹಿತಕ್ಕೆ ಅದನ್ನು ಬಳಸುತ್ತಿರಬೇಕು. ವಿವರಗಳು ಇದೇಸಂಚಿಕೆಯಲ್ಲಿ ಇದೆ. ನಿಮ್ಮ ಅನುಭವವನ್ನು ಕ್ರಿಯೇಟ್‌ನೊಂದಿಗೆ ಹಂಚಿಕೊಳ್ಳಿ. ಸಾರ್ವಜನಿಕ ಸಭೆ, ಮುಖಾಮುಖಿಗಳನ್ನು ಸಂಘಟಿಸಿ. ಯಾವುದೇ ತಾಂತ್ರಿಕ ಮಾಹಿತಿಗೆ ನಮಗೆ ಬರೆಯಿರಿ. ಹೆಚ್ಚಿನ ವಿವರಕ್ಕೆ ಕ್ರಿಯೇಟ್‌ನ ಆರ್‌ಟಿಐ ಘಟಕವನ್ನು ಸಂಪರ್ಕಿಸಿ. ನಮ್ಮೆಲ್ಲ ಕೆಲಸಕ್ಕೆ ನವದೆಹಲಿಯ ಸಿಹೆಚ್‌ಆರ್‌ಐ ಬೆಂಬಲವಿದೆ.

## ರಸೀದಿ ಸಲ್ಲಿಕೆ ; ಜನ ಪ್ರತಿನಿಧಿಗಳು ವಿಫಲ!




**ನ**ಮ್ಮ ರಾಜ್ಯದ ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ರಾಜ್ಯ ಸರ್ಕಾರ ಆಕರ್ಷಕ ಯೋಜನೆಯೊಂದನ್ನು ಜಾರಿಗೊಳಿಸಿತ್ತು. ಅದರ ಪ್ರಕಾರ, ಪ್ರತಿ ಶಾಸಕರಿಗೆ ಕಂಪ್ಯೂಟರ್ ಖರೀದಿಗೆ 50 ಸಹಸ್ರ ರೂಪಾಯಿ ಗಳನ್ನು ಹಾಗೂ ಕಾರು ಖರೀದಿಗೆ 5 ಲಕ್ಷದ ಸಹಾಯಧನವನ್ನು ನೀಡಲಾಗುತ್ತಿತ್ತು. ಈ ಸಂಬಂಧ ಹಣವನ್ನು ಪಡೆದ ಶಾಸಕರು ಎರಡು ತಿಂಗಳೊಳಗೆ ಅಗತ್ಯವಾದ ರಸೀದಿಗಳು ಮತ್ತು ಬಳಕೆಯ ದೃಢೀಕರಣ ಪತ್ರವನ್ನು ಒದಗಿಸಬೇಕಾಗಿತ್ತು. ಇಲ್ಲದಿದ್ದರೆ ಆ ಮೊತ್ತವನ್ನು ಶಾಸಕರ ಸಂಬಳ, ಭತ್ಯೆಗಳ ಮೂಲದಿಂದ ಪಡೆದುಕೊಳ್ಳುವ ಪ್ರಾವಿಧಾನವೂ ಯೋಜನೆಯಲ್ಲಿತ್ತು. ಮಾಹಿತಿ ಹಕ್ಕಿನ ಅನ್ವಯ ಕ್ರಿಯೇಟ್ ಅರ್ಜಿ ಸಲ್ಲಿಸಿ, ಈ ಕೆಳಗಿನ ಮಾಹಿತಿಗಳನ್ನು ಕೇಳಿತ್ತು.

* ಈ ಅನುದಾನ ಪಡೆದ ವಿಧಾನಸಭೆ ಹಾಗೂ ಪರಿಷತ್ ಶಾಸಕರ ಪಟ್ಟಿ. ಅವರಿಗೆ ನೀಡಿದ ಚೆಕ್ ನಂಬರ್ ಹಾಗೂ ದಿನಾಂಕದ ವಿವರ.
* ರಸೀದಿ, ದೃಢೀಕರಣ ಸಲ್ಲಿಸಿದ ಹಾಗೂ ಸಲ್ಲಿಸಲು ವಿಫಲರಾದ ಶಾಸಕರ ಪಟ್ಟಿ.
* ಷರತ್ತು ಪೂರೈಸದ ಶಾಸಕರ ವಿರುದ್ಧ ತೆಗೆದುಕೊಂಡ ಕ್ರಮಗಳ ವಿವರ.

ಕರ್ನಾಟಕ ರಾಜ್ಯ ವಿಧಾನಸಭೆ ಕಾರ್ಯಾಲಯ ಮತ್ತು ಪರಿಷತ್ ಕಾರ್ಯಾಲಯ ಮಾಹಿತಿಗಳನ್ನು ಒದಗಿ ಸಿದವು. ಒಟ್ಟು 147 ಮಂದಿ ಜನ ಪ್ರತಿನಿಧಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಿಯೇ ಇರಲಿಲ್ಲ! ಕೆಲವು ಪ್ರಕರಣಗಳಲ್ಲಂತೂ ಈ ಶಾಸಕರು ಹಣ ಪಡೆದ ಎರಡು ವರ್ಷಗಳ ನಂತರವೂ ಯಾವುದೇ ಬಿಲ್ ಪೂರೈಸಿರಲಿಲ್ಲ! ಇಷ್ಟಕ್ಕೂ ಶಾಸಕಾಂಗ ಕಾರ್ಯಾಲಯಗಳು ಈ ಸುಸ್ತಿದಾರರಿಗೆ ಕೇವಲ ನೆನಪೋಲೆ ಕಳಿಸುವುದರಲ್ಲೇ ತೃಪ್ತವಾಗಿದ್ದವು. ಪಾವತಿಸಿದ ಹಣವನ್ನು ಹಿಂತಿರುಗಿ ಪಡೆಯಲು ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ.

ಈ ಕುರಿತಾಗಿ ಕ್ರಿಯೇಟ್ ಸಂಸ್ಥೆ 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಲೇಖನವೊಂದನ್ನು ಬರೆಯಿತು. 'ಜೀ ಕನ್ನಡ' ಟಿವಿ ಛಾನೆಲ್ ವಿಷಯ ಮತ್ತು ಎಲ್ಲ ದಾಖಲೆಗಳನ್ನು ವಿಡಿಯೋ ಚಿತ್ರೀಕರಣ ಮಾಡಿಕೊಂಡಿತು. ಈ ಮಧ್ಯೆ ಅಗತ್ಯ ಕ್ರಮವನ್ನು ಕೈಗೊಳ್ಳಲು ಒತ್ತಾಯಿಸಿ ಗೌರವಾನ್ವಿತ ಸ್ಪೀಕರ್‌ರಿಗೆ ಪತ್ರ ಬರೆಯಲಾಯಿತು. ಕೆಲವೇ ದಿನಗಳಲ್ಲಿ ಸ್ಪೀಕರ್‌ರು ಎಲ್ಲ ದಾಖಲೆಗಳನ್ನು ಒದಗಿಸಲು, ಇಲ್ಲವೇ ಮರು ವಸೂಲಿ ಕ್ರಮವನ್ನು ಎದುರಿಸುವಂತೆ ಈ ಶಾಸಕರಿಗೆ ಸೂಚಿಸಿದ

## ಬಯೋ ಡೇಟಾ - ಮಾಹಿತಿ ಹಕ್ಕಿಗೆ ದಕ್ಕಿತೇ?

**ಹ**ಲವು ಸಾರ್ವಜನಿಕ ಪ್ರಾಧಿಕಾರಗಳು ನಾಗರಿಕರಿಂದ ನೇಮಕ ಮತ್ತು ಉದ್ಯೋಗ ವಿಚಾರವಾಗಿ ಅರ್ಜಿಗಳನ್ನು ಆಹ್ವಾನಿಸುತ್ತವೆ. ಸಂಭಾವ್ಯ ಅಭ್ಯರ್ಥಿಗಳು ತಮ್ಮ ವೈಯುಕ್ತಿಕ ವಿವರಗಳೊಂದಿಗೆ ಅರ್ಜಿಯನ್ನು ಸಲ್ಲಿಸುತ್ತಾರೆ. ಇದರಲ್ಲಿ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷಾ ವರದಿಯೂ ಸೇರಿರಬಹುದು. ಇಂತಹ ದಾಖಲೆಯನ್ನು ನಾಗರಿಕನೊಬ್ಬ ಮಾಹಿತಿ ಕಾಯ್ದೆ 2005ನ್ನು ಬಳಸಿ ಪಡೆಯಲಿಕ್ಕೆ ಸಾಧ್ಯವೇ?

ಈ ಮುಖ್ಯ ಪ್ರಶ್ನೆ 2006ರ ಏಪ್ರಿಲ್‌ನಲ್ಲಿ ಕೇಂದ್ರ ಮಾಹಿತಿ ಆಯೋಗದ ಮುಂದೆ ಬಂದಿತ್ತು. ಶ್ರೀ ಭಗವಾನ್ ಚಂದ್ ಸಕ್ಸೇನಾರವರು, ಸಹಾಯಕ ನಿರ್ದೇಶಕರಾಗಿ ಆಯ್ಕೆಯಾದ ನಾಲ್ವರು ಅಭ್ಯರ್ಥಿಗಳು ಸಲ್ಲಿಸಿದ ವೈಯುಕ್ತಿಕ ವಿವರಗಳ ಪ್ರತಿಯನ್ನು ಕೇಳಿ ಅರ್ಜಿ ಸಲ್ಲಿಸಿದರು. ಅವರು ಈ ಅಭ್ಯಥಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ವೈದ್ಯಕೀಯ ವರದಿಗಳ ಪ್ರತಿಯನ್ನು ಕೇಳಿದ್ದರು.

ಕೇಂದ್ರ ಮಾಹಿತಿ ಆಯೋಗ, ವೈಯುಕ್ತಿಕ ವಿವರಗಳ ಬಯೋ ಡೇಟಾ ಸಾರ್ವಜನಿಕ ದಾಖಲೆ ಎಂಬ ವಾದವನ್ನು ಎತ್ತಿಹಿಡಿದಿದೆ. ಈ ಮಾಹಿತಿಯನ್ನು ಕೇಳಿದ ಅರ್ಜಿದಾರರಿಗೆ ಒದಗಿಸಲು ಆದೇಶಿಸಿದೆ. ಯಾವುದೇ ಅಭ್ಯರ್ಥಿ ಸಾರ್ವಜನಿಕ ಪ್ರಾಧಿಕಾರದಲ್ಲಿ ನೇಮಕಕ್ಕೆ ತನ್ನ ಅರ್ಜಿ ದಾಖಲಿಸುವುದೆಂದರೆ, ಆತನ ಈ ಮಾಹಿತಿಗಳು ಸಾರ್ವಜನಿಕವಾದುದು ಎಂದೇ ಅರ್ಥೈಸಬೇಕು ಎಂದು ಸಿಐಸಿ ಅಭಿಪ್ರಾಯಪಟ್ಟಿದೆ. ಇವು ವೈಯುಕ್ತಿಕತೆಯ ವ್ಯಾಪ್ತಿಗೆ ಬರುತ್ತವೆಂದು ವಾದಿಸುವಂತಿಲ್ಲ.

ಇದೇ ವೇಳೆ ಸಿಐಸಿ ವೈದ್ಯಕೀಯ ವರದಿಯನ್ನು ಬಹಿರಂಗಪಡಿಸಲು ನಿರಾಕರಿಸಿದೆ. ಆಯೋಗದ ಪ್ರಕಾರ, ವೈದ್ಯಕೀಯ ಪರೀಕ್ಷಾ ಮಾಹಿತಿ ವ್ಯಕ್ತಿಯ ಗೌಪ್ಯತೆಗೆ ಸಂಬಂಧಿಸಿದಾಗಿದ್ದು, ಇದನ್ನು ಅರ್ಜಿದಾರನಿಗೆ ಒದಗಿಸುವುದು ಉಲ್ಲಂಘನೆಯಾಗುತ್ತದೆ. ಹಾಗಾಗಿ ಮಾಹಿತಿ ಹಕ್ಕಿನಡಿ ಕೊಡುವಂತಿಲ್ಲ ಎಂದು ಸಿಐಸಿ ತೀರ್ಪಿತ್ತಿದೆ. ಆದರೆ ಸಾರ್ವಜನಿಕ ಮಾಹಿತಿ ಅಧಿಕಾರಿಗೆ, ಈ ನಾಲ್ವರು ಅಭ್ಯಥಿಗಳು ವೈದ್ಯಕೀಯ ವರದಿ ಪ್ರಕಾರ ದೈಹಿಕ ಅರ್ಹತೆ ಪಡೆದಿದ್ದಾರೋ, ಇಲ್ಲವೋ ಎಂಬ ಮಾಹಿತಿಯನ್ನು ಒದಗಿಸಲು ಸೂಚಿಸಲಾಗಿದೆ.

**(ಐಸಿಪಿಬಿ/ಎ-9/ಸಿಯಸಿ/2006-3.4.2006)**

## ಮಾಹಿತಿ ಹಕ್ಕು ಬಳಸುವುದು ಹೇಗೆ?

**ಕ**ಳೆದೆರಡು ವರ್ಷಗಳಿಂದ ಮಾಹಿತಿ ಹಕ್ಕು ಕಾನೂನಿನ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ರರಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಹಾಗು ಮಾಧ್ಯಮ ನಾಗರೀಕರಲ್ಲಿ ಜಾಗೃತಿ ಉಂಟುಮಾಡಲು ಕ್ರಮ ಕೈಗೊಂಡಿದೆ. ಅಲ್ಲದೆ ಅವುಗಳೇ ಅರ್ಜಿಸಲ್ಲಿಸಿ ಮಾಹಿತಿ ಪಡೆದು ನಾಗರೀಕರಿಗೆ ಮನವರಿಕೆ ಮಾಡಿಕೊಟ್ಟಿದೆ. ಇದರ ಜೊತೆಗೆ ಉದ್ಯಮಕ್ಕೆ ಸಂಬಂಧಪಟ್ಟ ಸಂಸ್ಥೆಗಳು ತಮ್ಮದೆ ಆದ ರೀತಿಯಲ್ಲಿ ಮಾಹಿತಿ ಹಕ್ಕು ಬಗ್ಗೆ ಜನಾಂದೋಳನ ಕಾರ್ಯಕ್ರಮ ಆರಂಭಿಸಿದೆ. ಉದಾಹರಣೆಗೆ ಲೆಕ್ಕ ಪತ್ರ ಪರಿಶೋಧಕರ ಸಂಸ್ಥೆ (Institute of Chartered Accountants of India) ಮಂಜುನಾಥ್ ಟ್ರಸ್ಟ್, ಪರಿವರ್ತನ್, ಕ್ರಿಯೇಟ್, ಸಿ.ಎಚ್.ಆರ್.ಐ, ಸಿ.ಎಂ.ಎಸ್. ಎಂ.ಕೆ.ಎಸ್.ಎಸ್. ಮುಂತಾದ ಸಂಸ್ಥೆಗಳು ಸಭೆ, ತರಬೇತಿ ಶಿಬಿರ, ಹೆಲ್ಪ್ ಲೈನ್, ಆರ್.ಟಿ.ಐ. ಕ್ಲಿನಿಕ್ ಇತ್ಯಾದಿ ಮೂಲಕ ಜನರಲ್ಲಿ ಮಾಹಿತಿ ಹಕ್ಕು ಬಗ್ಗೆ ಆಸಕ್ತಿ ಉಂಟುಮಾಡಲು ಶ್ರಮಿಸುತ್ತಿದೆ. ಆದರೆ ರಾಷ್ಟ್ರದ ಯಾವುದೆ ರಾಜ್ಯ ಸರ್ಕಾರವೂ ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಮಾಹಿತಿ ಹಕ್ಕು ಕಾನೂನನ್ನು ಒಂದು ಶಾಪವೆಂದೆ ಪರಿಗಣಿಸಿರುವ ಅಧಿಕಾರ ಶಾಹಿ ಆದಷ್ಟು ಬೇಗ ಈ ಕಾನೂನಿನಿಂದ ಮುಕ್ತಿ ದೊರೆತರೆ ಸಾಕು ಎಂದು ಬಾವಿಸಿದಂತಿದೆ.

ಯಾವುದೆ ಕಾನೂನು ಜಾರಿಗೆ ಬಂದ ಕೂಡಲೆ ಅದರ ಬಗ್ಗೆ ಶಿಕ್ಷಣ ನೀಡುವುದು, ಜಾಗೃತಿ ಉಂಟುಮಾಡುವುದು, ಮಾರ್ಗದರ್ಶಿ ಪ್ರಕಟಿಸಿವುದು, ಕಾನೂನಿನ ಆಚರಣೆಗೆ ಬೇಕಾದ ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಈ ಹೊಣೆಗಾರಿಕೆ ಕುರಿತು ಕಾನೂನಿನಲ್ಲಿ ಯಾವುದೆ ಉಲ್ಲೇಖವಿಲ್ಲದಿದ್ದರು ಅದನ್ನು ನಿರ್ವಹಿಸುವುದು ಸರ್ಕಾರದ ಕೆಲಸ. ಆದರೆ ಮಾಹಿತಿ ಹಕ್ಕು ಕಾನೂನಿನಲ್ಲಿ ಸರ್ಕಾರದ ಕರ್ತವ್ಯ ಹಾಗು ಜವಾಬ್ದಾರಿಯನ್ನು ಉಲ್ಲೇಖಿಸಿದ್ದರೂ ಅದರ ಬಗ್ಗೆ ಯಾವುದೆ ಕ್ರಮ ಕೈಗೊಳ್ಳದಿರುವುದು ಖೇದನೀಯ. ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 26ರ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಹಿತಿ ಹಕ್ಕು ಅಗ್ಗೆ ಕೈಪಿಡಿ ಪ್ರಕಟಿಸಬೇಕು. ಸಾಮಾನ್ಯರಿಗೆ ಅರ್ಥವಾಗುವಂತೆ ಕಾನೂನನ್ನು ಸರಳೀಕರಿಸಿರುವ ಮಾರ್ಗದರ್ಶಿ ಪ್ರಕಟಿಸಬೇಕು. ಜನರು ಈ ಕಾನೂನನ್ನು ಬಳಸಲು ಪ್ರೇರಣೆ ನೀಡುವ ಕ್ರಮ ಕೈಗೊಳ್ಳಬೇಕು. ಆದರೆ ಇದಾವುದೂ ಆಗಿಲ್ಲ. ಈಗಷ್ಟೇ ಕರ್ನಾಟಕ ಸರ್ಕಾರ ಸಣ್ಣದೊಂದು ಕೈಪಿಡಿ ತರಲು ಪ್ರಯತ್ನ ನಡೆಸಿದೆ. ಮಾಹಿತಿ ಹಕ್ಕು ಕಾನೂನಿನ ಬಗ್ಗೆ ವಿಸ್ತಾರವಾದ ಜನಜಾಗೃತಿ ಕಾರ್ಯಕ್ರಮ ಇಲ್ಲದ ಕಾರಣ ಕಾನೂನು ಜಾರಿಗೆ ಬಂದು ಎರಡು ವರ್ಷಗಳಾಗಿದ್ದರೂ ಅದನ್ನು ಬಳಸುವ ಮಾರ್ಗ ತಿಳಿಯದವರೇ ಹೆಚ್ಚಾಗಿದ್ದಾರೆ. ಮಾಹಿತಿ ಹಕ್ಕು ಕಾನೂನು ಬಳಸುವುದು ಹೇಗೆ ಎಂಬ ಪ್ರಶ್ನೆ ಪದೇ ಪದೇ ಕೇಳಿ ಬರುತ್ತಿದೆ.

ಮಾಹಿತಿ ಹಕ್ಕು ಕಾನೂನು ನಾಗರೀಕರಿಗೆ ದೊರೆತಿರುವ ಒಂದು ಪ್ರಬಲವಾದ ಅಸ್ತ್ರ. ಅದನ್ನು ಬಳಸುವುದಕ್ಕೆ ಯಾವುದೆ ಪರಿಣತಿ ಬೇಕಾಗಿಲ್ಲ ಅಥವ ಕಾನೂನಿನ ಪಾಂಡಿತ್ಯ ಬೇಕಾಗಿಲ್ಲ. ಹೆಚ್ಚಿನ ಸಮಯ ಅಥವ ಹಣವೂ ಬೇಕಾಗಿಲ್ಲ. ಮಾಹಿತಿ ಹಕ್ಕು ಕಾನೂನು ಬಳಸಲು ಬೇಕಿರುವುದು ಆಸಕ್ತಿ, ಅದನ್ನು ಕಡೆತನಕ

## ಮಾಹಿತಿ ಹಕ್ಕು ಬಳಸುವುದು ಹೇಗೆ?

(ಹಿಂದಿನ ಪುಟದಿಂದ)

ಕೊಂಡೊಯ್ಯುವ ಸಮಾಧಾನ ಹಾಗು ದೊರಕಿದ ಮಾಹಿತಿ ಬಳಸಿಕೊಳ್ಳುವ ಚತುರತೆ. ಈ ಕಾನೂನು ಬಳಸುವುದನ್ನು ಮೂರು ಹಂತಗಳಾಗಿ ವಿಂಗಡಿಸಬಹುದು.  ಅರ್ಜಿ ತಯಾರಿಸುವುದಕ್ಕೆ ಮುಂದಿನ ಹಂತ, ಅರ್ಜಿ ತಯಾರಿಸುವ ಹಂತ ಹಾಗು ಮಾಹಿತಿ ದೊರಕಿದ ನಂತರ ಕೈಗೊಳ್ಳಬೇಕಾದ ಹಂತ. ಪ್ರಥಮವಾಗಿ ನಿಮಗೆ ಯಾವ ವಿಷಯದ ಬಗ್ಗೆ ಮಾಹಿತಿ ಬೇಕು ಎಂಬುದನ್ನು ನಿರ್ಧರಿಸಿ.  ವಿಷಯ ಎಂದಾಕ್ಷಣ ಸೂರ್ಯನ ಕೆಳಗಿರುವ ಎಲ್ಲ ವಿಷಯವೂ ಆಗಬಹುದು. ವಿಷಯ ನಿಮ್ಮ ವೈಯಕ್ತಿಕ ವ್ಯವಹಾರಗಳಿಗೆ ಅಥವ ಒಂದು ಸಮುದಾಯಕ್ಕೆ ಸಂಬಧಪಟ್ಟ ವಿಷಯವಾಗಿರಬಹುದು. ಉದಾಹರಣೆಗೆ ರೇಷನ್ ಕಾರ್ಡ್ ಬೇಕೆಂದು ಆಹಾರ ಇಲಾಖೆಗೆ ಅರ್ಜಿ ಸಲ್ಲಿಸಿರುತ್ತೀರಿ. ಆದರೆ ಕಾರಣಾಂತರಗಳಿಂದ ಅದರ ಬಗ್ಗೆ ಇಲಾಖೆಯವರು ಯಾವುದೆ ಕ್ರಮ ಕೈಗೊಳ್ಳುವುದಿಲ್ಲ. ನೀವು ಇಲಾಖೆಗೆ ಎಷ್ಟು ಬಾರಿ ಸುತ್ತಾಡಿದರೂ ಪ್ರಯೋಜನ ವಾಗುವುದಿಲ್ಲ. ಆಗ ಮಾಹಿತಿ ಹಕ್ಕು ಬಳಸಿಕೊಳ್ಳಬಹುದು. ನೀವು ಸಲ್ಲಿಸಿದ್ದ ಅರ್ಜಿ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಕೇಳುವುದೇ ಮಾಹಿತಿ ಆಗುತ್ತದೆ. ನನ್ನ ಅರ್ಜಿ ಯಾವ ಹಂತದಲ್ಲಿದೆ? ಯಾಕಿಷ್ಟು ವಿಳಂಬ? ಅರ್ಜಿ ಯಾವ ಅಧಿಕಾರಿ ಬಳಿ ಇದೆ? ರೇಷನ್ ಕಾರ್ಡ ನೀಡಲು ಎಷ್ಟು ದಿನಗಳು ಬೇಕು? ಇತ್ಯಾದಿ ಪ್ರಶ್ನೆ ಕೇಳುವುದೇ ಮಾಹಿತಿ ಆಗುತ್ತದೆ.

ಕೆಲವೊಮ್ಮೆ ವೈಯಕ್ತಿಕ ವಿಷಯವಲ್ಲದೆ ಸಮಾಜಕ್ಕೆ ಸಂಬಂಧಪಟ್ಟ ಮಾಹಿತಿಯನ್ನೂ ಕೇಳ ಬಹುದು. ಉದಾಹರಣೆಗೆ ನಮ್ಮ ಗ್ರಾಮವನ್ನು ಸಂಪೂರ್ಣ ಸ್ವಚ್ಛ ಗ್ರಾಮದ ಯೋಜನೆಯಲ್ಲಿ ಸೇರಿಸಲಾಗಿದಿಯೆ? ಹಾಗಿದ್ದಲ್ಲಿ ಅದಕ್ಕೆ ಮಂಜೂರಾಗಿರುವ ಹಣ ಎಷ್ಟು? ಯಾವ ಯಾವ ಅಭಿವೃದ್ದಿ ಕೆಲಸಗಳಿಗೆ ಎಷ್ಟೆಷ್ಟು ಹಣ ಮಂಜೂರಾಗಿದೆ? ಇದುವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? ಕಾಮಗಾರಿಗೆ ನೇಮಕವಾಗಿರುವ ಗುತ್ತಿಗೆದಾರ ಯಾರು? ಕಾಮಗಾರಿ ಯಾವ ಹಂಟದಲ್ಲಿದೆ? ಅದರ ವಿವರ ಕೇಳಬಹುದು. ಜೊತೆಗೆ ಅದಕ್ಕೆ ಸಂಬಂಧಪಟ್ಟ ದಾಖಲೆ, ಕಾಗದ ಪತ್ರ, ನೋಟಿಂಗ್ಸ್ ಇತ್ಯಾದಿ ಬೇಕೆಂದು ಕೇಳಬಹುದು ಹಾಗು/ಅಥವ ಅವುಗಳನ್ನು ಖುದ್ದಾಗಿ ಪರೀಕ್ಷಿಸಲು ಅವಕಾಶ ಮಾದಿಕೊಡಬೇಕೆಂದೂ ಕೇಳಬಹುದು. ಮಾಹಿತಿ ಕಾನೂನಿನ ಪ್ರಕಾರ ನಾಗರೀಕರಿಗೆ ಈ ಹಕ್ಕು ನೀಡಲಾಗಿದೆ.

ಯಾವ ವಿಷಯ ಅಥವ ಮಾಹಿತಿ ಬೇಕೆಂದು ನಿರ್ಧರಿಸಿದ ಮೇಲೆ ಅದು ಯಾವ ಇಲಾಖೆಗೆ ಅಥವ ಸಂಸ್ಥೆಗೆ ಸೇರಿದ್ದು ಎಂಬುದನ್ನು ಗುರುತಿಸಬೇಕು. ಆನಂತರ ಅರ್ಜಿ ತಯಾರಿಸಬೇಕು. ಮಾಹಿತಿ ಹಕ್ಕು ಕಾನೂನು ಪ್ರಕಾರ ಅರ್ಜಿ ತಯಾರಿಸುವುದು ಸುಲಭದ ಕೆಲಸವೆಂದೇ ತೋರುತ್ತದೆ. ಆದರೆ ಅದನ್ನು ತಯಾರಿಸಲು ಕುಳಿತಾಗ ಅದರ ಹಿಂದಿನ ಕಷ್ಟ ಗೋಚರಿಸುತ್ತದೆ. ಅಧಿಕಾರಿಗಳು ಯಾವುದೇ ಕಾರಣಕ್ಕೂ ಅರ್ಜಿಯನ್ನು ತಿರಸ್ಕರಿಸದಂತೆ ಮಾಹಿತಿ ಕೇಳಬೇಕು. ಕಾನೂನಿನ ಪ್ರಕಾರ ಅರ್ಜಿ ಇದೇ ನಮೂನೆಯಲ್ಲಿರಬೇಕೆಂಬ ನಿಯಮವಿಲ್ಲ. ಆದರೂ ಕೆಲವೊಂದು ಅಂಶಗಳು ಅದರಲ್ಲಿರಬೇಕು. ಅರ್ಜಿದಾರರ ಹೆಸರು, ಸಂಪೂರ್ಣ ವಿಳಾಸ, ದೂರವಾಣಿ, ಈಮೇಲ್ (ಇದ್ದಲ್ಲಿ) ನಮೋದಿಸಬೇಕು. ಯಾವ ಮಾಹಿತಿ ಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ಮಾಹಿತಿ ಪ್ರಶ್ನೆಗಳಂತೆ ತೋರದಂತೆ  ನಿಗಾ ವಹಿಸಬೇಕು. ಹಾಗೆಯೇ ಅಧಿಕಾರಿಗಳ ಅಭಿಪ್ರಾಯ, ಸಲಹೆ, ಸೂಚನೆ ಇತ್ಯಾದಿ ಕೇಳ ಬಾರದು. ಮಾಹಿತಿ ಹಕ್ಕು ಕಾನೂನು ಇದಕ್ಕೆ ಅವಕಾಶ ನೀಡುವುದಿಲ್ಲ.

ಅರ್ಜಿಯನ್ನು ಯಾರಿಗೆ ಸಲ್ಲಿಸಬೇಕು ಎಂಬುದು ಮುಖ್ಯ. ಕಾನೂನಿನ ಪ್ರಕಾರ ಎಲ್ಲ ಸಾರ್ವ ಜನಿಕ ಪ್ರಾಧಿಕಾರದಲ್ಲೂ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಕ ಮಾಡಬೇಕಿದೆ. ಸರ್ಕಾರ ಈ ಕೆಸಲವನ್ನು ಈಗಾಗಲೆ ಮಾಡಿದೆ. ನೀವು ಯಾವ ಇಲಾಖೆ/ಸಂಸ್ಥೆಯಿಂದ ಮಾಹಿತಿ ಬಯಸುತ್ತೀರೋ ಆ ಇಲಾಖೆಯ ಮಾಹಿತಿ ಅಧಿಕಾರಿ ಯಾರೆಂದು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗು ಇಲಾಖೆಯ ಹೆಸರು ನಮೋದಿಸಿದರೆ ಸಾಕಾದೀತು. ನೀವು ಬಯಸುವ ಮಾಹಿತಿ ಯಾವ ವರ್ಷಕ್ಕೆ ಸಂಬಂಧ ಪಟ್ಟಿದ್ದು ಎಂಬುದನ್ನು ತಿಳಿಸಬೇಕು. ಹೀಗೆ ಮಾಡುವಾಗ ಅತ್ಯಂತ ಹಳೆಯ ದಾಖಲೆಗಳನ್ನು ವಿನಾಕಾರಣ ಕೇಳಬೇಡಿ. ಅಗತ್ಯವಿದ್ದಲ್ಲಿ ಮಾತ್ರ ಕೇಳಿ. ಜೊತೆಗೆ ಒಂದೆರಡು ವರ್ಷದ ಮಾಹಿತಿ ಕೇಳಿದರೆ ಉತ್ತಮ. ಸರ್ಕಾರಿ ಕಚೇರಿಗಳಲ್ಲಿ ದಾಖಲೆಗಳ ನಿರ್ವಹಣೆಯ ಸ್ಥಿತಿ ನಿಮಗೆ ತಿಳಿದಿರಬೇಕಲ್ಲವೆ?

ಅರ್ಜಿಯ ಜೊತೆ ಹತ್ತು ರೂಪಾಯಿ ಅರ್ಜಿ ಶುಲ್ಕ ಪಾವತಿಸುವುದನ್ನು ಮರೆಯಬೇಡಿ. ಶುಲ್ಕವನ್ನು ನಗದು, ಡಿಡಿ. ಬ್ಯಾಂಕರ್ಸ ಚೆಕ್, ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬಹುದು. ಇತ್ತೀಚಿಗೆ ಕರ್ನಾಟಕ ಮಾಹಿತಿ ಆಯೋಗವು ತೀರ್ಪು ನೀಡಿ ಶುಲ್ಕವನ್ನು ಮನಿ ಆರ್ಡರ್ ಮೂಲಕವೂ ಕಳುಹಿಸಬಹುದೆಂದು ತಿಳಿಸಿದೆ. ಇದರ ವಿವರವನ್ನು ಬರೆದಿಟ್ಟುಕೊಳ್ಳಿ. ಬಡತನ ರೇಖೆಗಿಂತ ಕೆಳಗಿರುವವರು ಯಾವುದೆ ಶುಲ್ಕ ಪಾವತಿ ಮಾಡುವ ಅಗತ್ಯವಿಲ್ಲ. ಆದರೆ ಅರ್ಜಿದಾರರು ಸೂಕ್ತ ದಾಖಲೆಗಳನ್ನು ಪುರಾವೆಯಾಗಿ ಒದಗಿಸಿ ತಾವು ಬಡತನ ರೇಖೆಗಿಂತ ಕಳಗಿನವರು ಎಂದು ಸಾಬೀತುಪಡಿಸಬೇಕು. ಅರ್ಜಿ ಸಲ್ಲಿಸಿದ ೩೦ ದಿನಗಳ ಅವದಿಯಲ್ಲಿ ಮಾಹಿತಿ ಅಧಿಕಾರಿಗಳು ನೀವು ಕೇಳಿರುವ ಮಾಹಿತಿ ನೀಡಬೇಕು. ಅಥವ ಕಾನೂನು ಪ್ರಕಾರ ನೀಡಲಾಗದ ಮಾಹಿತಿಯಾಗಿದ್ದರೆ ಅದನ್ನು ತಿರಸ್ಕರಿಸಬಹುದು. ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ ಎಂಬುದನ್ನು ಅವರು ಸೂಚಿಸಬೇಕು. ಹಾಗು ಈ ತಿರಸ್ಕಾರದ ಬಗ್ಗೆ ಅಸಮಾಧಾನವಿದ್ದಲ್ಲಿ ಯಾರಲ್ಲಿ ಮೇಲ್ಮನವಿ ಸಲ್ಲಿಸಬಹುದು ಎಂಬುದನ್ನು ಸಹ ತಿಳಿಸಬೇಕು. ನೀವು ಕೇಳಿರುವ ಮಾಹಿತಿ ಎಷ್ಟು ಪುಟಗಳಲ್ಲಿದೆ ಹಾಗು ಅದಕ್ಕೆ ತಗಲುವ ವೆಚ್ಚದ ಮೊತ್ತವನ್ನು ತಿಳಿಸಬೇಕು. ಅದನ್ನು ಅರ್ಜಿದಾರರು ಪಾವತಿಸಬೇಕಾಗುತ್ತದೆ. ಆನಂತರವೆ ಮಾಹಿತಿ ನೀಡಲಾಗುವುದು.

ಕೆಲವೊಮ್ಮೆ ಮಾಹಿತಿ ಅಧಿಕಾರಿಗಳು ಯಾವುದೆ ಜವಾಬು ನೀಡದಿದ್ದಾಗ ಮಾಹಿತಿಯನ್ನು ನಿರಾಕರಿಸಲಾಗಿದೆ ಎಂದು ಬಾವಿಸಿಕೊಳ್ಳಬಹುದು. ಆಗ ಮೇಲ್ಮನವಿಯನ್ನು ಪ್ರಾಧಿಕಾರದಲ್ಲಿ ಇಲ್ಲವೆ ಮಾಹಿತಿ ಆಯೋಗದಲ್ಲಿ ಸಲ್ಲಿಸಬಹುದು. ಅದಕ್ಕೆ ತನ್ನದೆ ಆದ ನೀತಿ ನಿಯಮವಿದೆ. ಅದನ್ನು ಅನುಸರಿಸಬೇಕು.

ಮಾಹಿತಿ ಪಡೆದನಂತರ ಯಾವ ಕ್ರಮ ಅನುಸರಿಸುವುದು? ಅದನ್ನು ಹೇಗೆ ಉಪಯೋಗಿಸುವುದು? ಇದು ಮೂರನೆ ಹಾಗು ಕೊನೆಯ ಹಂತ. ವೈಯಕ್ತಿಕ ವಿಷಯವಾದರೆ ಮಾಹಿತಿ ದೊರಕಿದ ಕೂಡಲೆ ಸಮಸ್ಯೆ ಪರಿಹಾರವಾಯಿತು ಎಂದು ಸುಮ್ಮನಿರಬಹುದು. ಆದರೆ ಸಾರ್ವಜನಿಕ ವಿಷಯವಾಗಿದ್ದು ಹಣ, ಅಧಿಕಾರ ಇತ್ಯದಿ ದುರುಪಯೋಗವಾಗಿದ್ದರೆ ಅದನ್ನು ಬಹಿರಂಗ ಪಡಿಸಬೇಕು. ದೊರೆತ ಮಾಹಿತಿಯನ್ನು ಮಾಧ್ಯಮದೊಂದಿಗೆ ಹಂಚಿಕೊಳ್ಳಬೇಕು. ಅದರ ಬಗ್ಗೆ ಕ್ರಮ ಕೈಗೊಳ್ಳೂವಂತೆ ಹಿರಿಯ ಅಧಿಕಾರಿಯಲ್ಲಿ ಮನವಿ ಸಲ್ಲಿಸಬೇಕು. ಮುಖ್ಯವಾಗಿ ಇತರೆ ಕಾನೂನು ಬಳಸಿಕೊಳ್ಳಲು ಸಾಧ್ಯವೆ ಯೋಚಿಸಬೇಕು. ಹೀಗೆ ಮಾಡಿದಾಗ ಮಾತ್ರ ಮಾಹಿತಿ ಪಡೆದಿದ್ದು ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಕಚೇರಿಯಲ್ಲಿದ್ದ ದಾಖಲೆಯ ಇನ್ನೊಂದು ಪ್ರತಿ ನಿಮ್ಮ ಮನೆಯಲ್ಲಿರುತ್ತದೆ.

ವೈ.ಜಿ.ಮುರಳೀಧರ

(ಕೃಪೆ : ಟೈಂಸ್ ಆಫ್ ಇಂಡಿಯಾ - ಕನ್ನಡ)

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

CREAT BANGALORE

# ಗ್ರಾಹಕರ ಹಕ್ಕು ಶಿಕ್ಷಣ ಮತ್ತು ಜಾಗೃತಿ ವೇದಿಕೆ

ನಂ.239,5ನೇ 'ಸಿ' ಮುಖ್ಯರಸ್ತೆ,ರೆಮ್ಕೊ ಲೇಔಟ್,ಹಂಪಿನಗರ,ಬೆಂಗಳೂರು-560 104

ದೂರವಾಣಿ:91-080-23357280,E.mail : creatorg@sify.com , Website : www.creatindia.org